ಬೆಂಗಳೂರಿನ ವಿದ್ಯಾನಗರ		
ತರಬೇತಿ ಕೇಂದ್ರ	–	325.00
ದಕ್ಷಿಣ ಕನ್ನಡ ಜಿಲ್ಲೆಯ		
ಮಂಗಳೂರು ಜಿಲ್ಲಾ	–	
ಕ್ರೀಡಾಂಗಣ	–	309.00
ಶಿವಮೊಗ್ಗ ಜಿಲ್ಲಾ		
ಕ್ರೀಡಾಂಗಣ	–	309.00
ಗುಲ್ಬರ್ಗಾ ಜಿಲ್ಲಾ ಕ್ರೀಡಾಂಗಣ	–	307.00

ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಬೇರೆ ಜಿಲ್ಲೆಗೆ ವರ್ಗಾಯಿಸಿರುವುದು

502 (595) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮುನಿಯಾಲು ಪ್ರಾಥಮಿಕ ಆರೋಗ್ಯ ಕೆಂದ್ರವನ್ನು ಸೇರಿ ಕೆಲವು ಆಸ್ಪತ್ರೆಗಳನ್ನು ಬೇರೆ ಜಿಲ್ಲೆಗೆ ವರ್ಗಾಯಿಸಲು ಸರ್ಕಾರದ ಆದೇಶ ಮಾಡಿದ್ದು ನಿಜವೆ;

ಆ) ಯಾವ ಯಾವ ಆರೋಗ್ಯ ಕೇಂದ್ರವನ್ನು ಎಲ್ಲೆಲ್ಲಿಗೆ ವರ್ಗಾಯಿಸಲು ಆದೇಶ ಮಾಡಲಾಗಿದೆ ಮತ್ತು ಕಾರಣವೇನು ;

ಇ) ಮನಿಯಾಲು (ವರಂಗ ಗ್ರಾಮ) ಸೇರಿ ಉಳಿದ ಐದು ಗ್ರಾಮದ ಜನರಿಗೆ ಅನ್ಯಾಯವಾಗುವುದರಿಂದ ಅದನ್ನು ಅಲ್ಲಿಯೆ ಉಳಿಸಲು ಸರ್ಕಾರ ಆದೇಶ ಮಾಡುವುದೆ;

ಈ) ಹಾಗಿದಲ್ಲಿ ಯಾವಾಗ ಮಾಡಲಾಗುವುದು ?

ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿ):–

ಅ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮುನಿಯಾಲು ಪ್ರಾಥಮಿಕ ಆರೋಗ್ಯ ಕೇಂದ್ರವೂ ಸೇರಿದಂತೆ ಮುನಿಯಾಲು, ವಡ್ಡರ್ಸೆ, ಪೆರ್ಡೂರು, ಹಟ್ಟಿಯಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸರ್ಕಾರವು ವಿಧಿಸಿದ ಷರತ್ತುಗಳನ್ನು ಸಕಾಲದಲ್ಲಿ ಪೂರೈಸದ ಹಿನ್ನೆಲೆಯಲ್ಲಿ ದಿ: 21–08–2010ರ ಆದೇಶದಲ್ಲಿ ರದ್ದುಪಡಿಸಲಾಗಿದೆ.

ಆ) ಕಾರ್ಕಳ ತಾಲ್ಲೂಕಿನ ಜನಸಂಖ್ಯೆ 1,79, 453 ಇದ್ದು ಮಾರ್ಗಸೂಚಿಗಳ ಅನ್ವಯ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದ್ದು, 25 ಪ್ರಾಥಮಿಕ

ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಮಾರ್ಗಸೂಚಿಗಳಿಗಿಂತ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಚ್ಚಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿರುವ ಪ್ರವಾಸೋದ್ಯಮ ಸ್ಥಳಗಳು

503 (678) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಡುಪಿ ಜಿಲ್ಲೆಯಲ್ಲಿ ಇರುವ ಪ್ರವಾಸೋದ್ಯಮ ಸ್ಥಳಗಳು ಯಾವುವು ;

ಆ) ಅವುಗಳ ಅಭಿವೃದ್ಧಿಗೆ ಕಳೆದ 3 ವರ್ಷಗಳಿಂದ ಎಷ್ಟು ಅನುದಾನವನ್ನು ಒದಗಿಸಲಾಗಿದೆ (ಕಾಮಗಾರಿವಾರು ವಿವರ ಒದಗಿಸುವುದು);

ಇ) ಕಾರ್ಕಳ ತಾಲ್ಲೂಕಿನ ಕೂಡ್ಲುತೀರ್ಥ, ಬಾಹುಬಲಿಬೆಟ್ಟ ಚತುರ್ಮುಖ ಬಸದಿ ಮತ್ತು ಅತ್ತೂರು ಸಂತ ಲಾರೆನ್ಸ್ ಇಗರ್ಜಿಗಳಲ್ಲಿ ಪ್ರವಸಿಗರ ಅಕರ್ಷಣೆಗೆ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗದೆ ?

ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿ):–

ಅ) ಉಡುಪಿ, ಮಲ್ಪೆ ಕಡಲತೀರ, ಸೇಂಟ್ ಮೇರೀಸ್ ಐಲ್ಯಾಂಡ್, ಕಾಪು ಕಡಲತೀರ, ಕೂಡ್ಲುತೀರ್ಥ, ಕಾರ್ಕಳ, ಡಿವೈನ್ ಪಾರ್ಕ್ ಕುಂದಾಪುರ, ಮರವಂತೆ ಕಡಲತೀರ, ಕೊಲ್ಲೂರು, ಅನೆಝರಿಗಳನ್ನು ಉಡುಪಿ ಜಿಲ್ಲೆಯಲ್ಲಿ ಪ್ರವಾಸಿ ಕ್ಷೇತ್ರಗಳೆಂದು ಗುರುತಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ರೂ. 1091.42 ಲಕ್ಷಗಳನ್ನು ಉಡುಪಿ ಜಿಲ್ಲೆ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿವೆ:

1) ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ಮಿಯಾರು ಗ್ರಾಮದ ಕಂಬಳ ಕ್ರೀಡಾ ಪ್ರದೇಶದಲ್ಲಿ ಗ್ಯಾಲರಿಗಳ ನಿರ್ಮಾಣಕ್ಕಾಗಿ ರೂ. 83.99 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2) ಕಾರ್ಕಳ ಗೊಮ್ಮಟಬೆಟ್ಟದಲ್ಲಿ ರೂ. 107.70 ಲಕ್ಷಗಳಲ್ಲಿ ಯಾತ್ರಿನಿವಾಸ ನಿರ್ಮಿಸಿ ಪ್ರವಾಸಿಗರಿಗಾಗಿ ತೆರೆಯಲಾಗಿದೆ.

3) ಉಡುಪಿ ಜಿಲ್ಲೆ, ಕಾಪು ಬೀಚ್ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ರೂ. 55.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.